ಎರಡನೆಯದು ತಂಗಡಿಗಿಯ ಬಳಿ ಯಾತ್ರಾರ್ಥಿಗಳು ಬರುವ ಸ್ಥಳವಾದುದರಿಂದ ಅಲ್ಲಿ ಒಂದು ಫುಟ್ ಬ್ರಿಡ್ಜ್ ಹಾಕುವುದಕ್ಕೆ ಸಾಧ್ಯವೇ ಎನ್ನುವುದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ.

ಶ್ರೀ ಸಿ. ಎನ್. ಪಾಟೀಲ್ :—ಸ್ವಾಮಿ, ನ್ಯಾಷನಲ್ ಹೈವೇ ಅಲೈನ್‌ಮೆಂಟ್ ಆಗುವುದಕ್ಕೆ ಮೊದಲು ಒಂದು ಬ್ರಿಡ್ಜ್‌ನ್ನು ತಂಗಡಿಗಿಯ ಬಳಿ ಹತ್ತಿರ ಆ ಜಾಗದಲ್ಲೇ ಆಗಲಿ ಅಥವಾ ಸ್ವಲ್ಪ ಕೆಳಗಡೆಯೇ ಆಗಲಿ ಹಾಕಬೇಕೆಂದು ದಿವಂಗತ ಶ್ರೀಮಾನ್ ಕಂಠಿಯವರ ಕಾಲದಲ್ಲಿ ಯೋಜನೆ ಮಾಡಿದ್ದರು. ಈಗ ಅದನ್ನು ಡೈವರ್ಟ್ ಮಾಡಿದ್ದಾರೆ. ಅದು ಐತಿಹಾಸಿಕವಾಗಿ 300–400 ವರ್ಷಗಳಿಂದಲೂ ಇರತಕ್ಕಂಥ ರಸ್ತೆ. ಬಿಜಾಪುರ ಮತ್ತು ರಾಯಚೂರು ಜನರು ಇಲ್ಲಿ ಒಂದು ಬ್ರಿಡ್ಜ್ ಆಗಬೇಕೆಂದು ಕೇಳುತ್ತಿದ್ದಾರೆ. Whatever bridge you construct on National Highway, you cannot divert this traffic of Thangadgi. I therefore request Government to consturct this Thangadgi Bridge whenever the finances permit. This request is on behalf of the entire people of Bijapur District and Raichur District.

ಶ್ರೀ ಹೆಚ್. ಎಂ. ಚೆನ್ನಬಸಪ್ಪ :—ಇದರ ಬಗ್ಗೆ ಯಾರೂ ಸಪ ಶಿಫಾರ್ಸು ಮಾಡದೇ ಇದ್ದರೂ ಕೂಡ ಅದು ಯಾತ್ರಾರ್ಥಿ ಸ್ಥಳವೆಂದು ನನಗೂ ಗೊತ್ತಿದೆ. ಇದು ಯಾತ್ರಾರ್ಥಿ ಸ್ಥಳ, ಇಲ್ಲಿಗೆ ಭಾರಿ ಸಮೂಹದಲ್ಲಿ ಜನರು ಬರುತ್ತಾರೆ ಎಂದು ಗೊತ್ತು. ಆದುದರಿಂದ ಮುಂದೆ ಪ್ರಾಜೆಕ್ಟ್ ಪ್ರೋಗ್ರಾಂ ಏನು ಮಾಡಬೇಕೆಂದು ಇದ್ದೇವೆ ಅದರಲ್ಲಿ ಇದನ್ನು ಹಾಕಲಿಕ್ಕೆ ಅಡ್ಡಿ ಇಲ್ಲ. ಆದೂ ಅಲ್ಲಿಗೆ ಒಂದು ಬ್ರಿಡ್ಜ್ ಹಾಕಿಬಿಟ್ಟು ಅಲ್ಲಿಗೆ ಒಂದು ಟೋಲ್‌ಗೇಟ್ ಹಾಕಿದರೆ ಆ ಹಣ ವಾಪಸ್ಸು ಬರುತ್ತದೆ ಎನ್ನುವ ಭರವಸೆ ಇದೆ. ಆದುದರಿಂದ ಅದನ್ನು ಮುಂದಿನ ಪ್ರೋಗ್ರಾಂನಲ್ಲಿ ಸೇರಿಸುವುದಕ್ಕೆ ಯೋಚನೆ ಮಾಡುತ್ತೇವೆ.

GRANTS TO PRE-PRIMARY EDUCATION INSTITUTIONS

856. Sri G. P. NANJAYYANAMATH (Guledgud).—

Will the Minister for Education be pleased to state :—

(*a*) the principle followed if any in giving grants to the pre-primary education institution managed by the private bodies in the old Mysore and integrated areas ;

(*b*) whether it is true that the institutions in old Mysore area are getting 50 per cent of the total admissible expenditure whereas the other areas are getting only twenty-five per cent ;

(*c*) if so, whether the Government has taken any action to avoid this discrimination ?

Sri A. R. BADARINARAYAN (Minister for Education).—

(*a*) Grants at the scales that existed in the different areas prior to integration are being given.

(*b*) Yes.

(*c*) Yes. A uniform Grant-in-Aid Code is under preparation.

ಶ್ರೀ ಜಿ. ಪಿ. ನಂಜಯ್ಯನಮಠ್ :—ಸ್ವಾಮಿ, ಯೂನಿಫಾರಂ ಗ್ರಾಂಟ್-ಇನ್-ಕೋಡ್ ತರುವುದಕ್ಕೆ ಇನ್ನು ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಎ.ಆರ್. ಬದರಿನಾರಾಯಣ್:—ಈಗಾಗಲೇ ಈ ಬಗ್ಗೆ ಕ್ರಮಗಳನ್ನು ತೆಗೆದುಕೊಂಡಿದೆ. ಬೇರೆ ಬೇರೆ ಸ್ಟೇಟ್‌ಗಳಲ್ಲಿ ಯಾವ ಯಾವ ರೀತಿ ಕ್ರಮವನ್ನು ತೆಗೆದುಕೊಂಡಿದ್ದಾರೆ ಅದರ ಇನ್‌ಫರ್ಮೇಷನ್ ಬೇಕು, ಅದಕ್ಕೆ ಬರೆದಿದ್ದೇವೆ. ಅಲ್ಲಿಂದ ಇನ್‌ಫರ್ಮೇಷನ್ ಬಂದ ತಕ್ಷಣ ಯೂನಿಫಾರಂ ಗ್ರಾಂಟ್-ಇನ್-ಕೋಡ್ ಮಾಡುವುದಕ್ಕೆ ಮಾಡುತ್ತೇವೆ.

ಶ್ರೀ ಜಿ. ಪಿ. ನಂಜಯ್ಯನಮಠ್ :—ಸ್ವಾಮಿ ಗ್ರಾಂಟ್ ಇನ್ ಏಡ್ ರೂಲ್ಸ್, ಬಗ್ಗೆ ಏಕ ರೂಪತೆಯನ್ನು ಕಲ್ಪಿಸುವುದಕ್ಕೆ ಇನ್ನು ಎಷ್ಟುದಿವಸ ಹಿಡಿಯುತ್ತದೆ ?

ಶ್ರೀ ಎ. ಆರ್. ಬದರಿನಾರಾಯಣ್ :—ಬೇಗ ಮಾಡಿಸುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಸ್ವಾಮಿ ಖಾಸಗಿ ವಿದ್ಯಾಸಂಸ್ಥೆಗಳಿಗೆ ಸರ್ಕಾರದವರು ಹೇರಳವಾಗಿ ಹಣ ಸಹಾಯವನ್ನು ಮಾಡುತ್ತ ಇರುವುದರಿಂದ ಆವಶ್ಯಕತೆ ಇಲ್ಲದೇ ಇರುವಂಥಾ ಕಡೆಗಳಲ್ಲೂ ಕೂಡ ಸರ್ಕಾರದವರು ಮತ್ತು ವಿದ್ಯಾ ಸಂಸ್ಥೆಗಳು ಶಾಲೆಗಳನ್ನು ಮತ್ತೆ ಪ್ರಾರಂಭ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್ :—ಇದು ಪ್ರೀ ಪ್ರೈಮರಿ ಎಜ್ಯುಕೇಷನ್‌ಗೆ ಸಂಬಂಧ ಪಟ್ಟದ್ದು. ಆದುದರಿಂದ ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ಉದ್ಭವಿಸುವುದಿಲ್ಲ.

Sri DODDA THIMMIAH.—Would you kindly tell me what is the cirteria for giving grants to private institutions and what are the reasons for discriminations which is mentioned in the question—50 per cent and 25 per cent ?

Sri A. R. BADARINARAYAN.—Grants given to Pre-Primary education is only very small. The Social Welfare Department also gives some grants. Since this is very small, and we have not taken in a big way, wherever there is application and wherever there is enthuiasm for starting pre-primary education, naturally we give them some assistance. In the old Mysore area, 50 per cent of the total admissible expenditure in urban areas and 70 per cent in rural areas is given. In addition 50 per cent D.A. is given. In the ex-Madras area, 50 per cent of the authorised expenditure ; in ex-Bombay area, 25 per cent of the maintenance and 50 per cent of D.A. is given.

Sri D. B. KALMANKAR.—It is mentioned in the answer that uniform grant-in-aid code is under preparation. May I know how much time it will take ?

Sri A. R. BADARINARAYAN.—I have answered just now that it will be done very soon.

DRINK WATER FACILITIES AT ANNIGERI AND MORAB VILLAGES

862. Sri M. K. KULKARNI (Navalgund).—

Will the Minister for Community Development and Social Welfare be pleased to state :—

(*a*) whether it has come to the notice of the Government that there is acute scarcity of drinking water in Annigeri and Morab Villages of Navalgund Taluk ;

(*b*) if so, the reasons for not providing drinking water facilities to these villages so far by the Government ?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) It is not correct to say that drinking water facility is not provided.

ಶ್ರೀ ಎಂ. ಕೆ. ಕುಲಕರ್ಣಿ :—(ಅ) ಗೆ ಉತ್ತರವಾಗಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿರುವುದಿಲ್ಲ ಎಂಬುದು ವಾಸ್ತವಾಂಶವಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಇದನ್ನು ಯಾವ ರೀತಿಯಾಗಿ ಒದಗಿಸುತ್ತಾ ಇದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಈಗ ಆಣ್ಣಿಗೇರಿ ಗ್ರಾಮ ಏನು ಇದೆ ಅದು ಈವೊತ್ತಿನ ದಿವಸದ ಜನಸಂಖ್ಯೆ 14,681 ಇದೆ. 1959 ನೇ ಇಸವಿಯಲ್ಲಿ ಇದಕ್ಕೆ 1 ಲಕ್ಷ 31 ಸಾವಿರ 800 ರೂಪಾಯಿ ಖರ್ಚು ಮಾಡಿ ಒಂದು ಡ್ರಿಂಕಿಂಗ್ ಪ್ಲಾಂಟ್ ಮಾಡಿ ಈವೊತ್ತಿನ ದಿವಸ 9 ಸಾವಿರ ಜನಸಂಖ್ಯೆಗೆ ಪೂರೈಸಲಾಗಿದೆ. ಮತ್ತೆ ಇನ್ನೊಂದು ಪ್ಲಾಂಟ್ ಮಾಡಿ 1990 ನೇ ಇಸವಿಗೆ 13 ಸಾವಿರ ಜನಸಂಖ್ಯೆಗೆ ಕುಡಿಯುವ ನೀರು ಪೂರೈಸಬೇಕೆಂದು ಮುಂದಿನ ಒಂದು ದೃಷ್ಟಿ ಇಟ್ಟುಕೊಂಡು ಯೋಚನೆ ಮಾಡಿತ್ತು. ಈಗ ಅದಕ್ಕಿಂತಲೂ ನಿರೀಕ್ಷಣೆ ಮೀರಿ ಜನಸಂಖ್ಯೆ ಜಾಸ್ತಿಯಾಗಿದೆ. ಈ ಪ್ಲಾಂಟ್ ಕೊಟ್ಟದ್ದು 31-3-1970 ನೇ ಇಸವಿಯಲ್ಲಿ ಆ ನೀರಿನ ಸರಬರಾಯಿ ಯೋಜನೆಯನ್ನು ಪಂಚಾಯಿತಿಗೆ ವಹಿಸಿಕೊಟ್ಟಿವು. ಈವೊತ್ತಿನ ದಿವಸ ಆ ನೀರು ಸಾಕಾಗುತ್ತಾ ಇಲ್ಲ. ಅದರ ಜೊತೆಗೆ ಮಾರುತಿ ವೆಲ್ ಇದೆ. ಆ ಓವರ್ ಟ್ಯಾಂಕ್‌ಗೆ ನೀರನ್ನು ಪಂಪ್ ಮಾಡುತ್ತಾ ಇದ್ದೇವೆ. ಈವಾಗ ಆ ಹಳ್ಳಿಗೆ ಬಹುಶಃ ಒಂದು ವಾರಕ್ಕೆ 2-3 ದಿವಸ